ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-7 Issue-2, September-October 2025, Pp. 33-39
©*IIMRD*, Mysuru
IIMRD JOURNALS
www.iimrd.com

# ತುಮಕೂರು ಜಿಲ್ಲೆಯ ಕೋಟೆಗಳಲ್ಲಿ ಕಂಡುಬರುವ ಐತಿಹ್ಯಗಳು

**ಅನಿಲ್‌ಕುಮಾರ್ ಎಂ.ಕೆ.**
ಬುಡಕಟ್ಟು ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ

**ಸಾರಾಂಶ: (Abstract)**

*ಐತಿಹ್ಯಗಳು ಸಾಮಾನ್ಯವಾಗಿ ಸತ್ಯಘಟನೆಯನ್ನು ಆಧರಿಸಿ ರೂಪಾಂತರ ಹೊಂದಿದ ಕಥನ ಮಾದರಿಯಾಗಿರುತ್ತವೆ. ಐತಿಹ್ಯದ ಒಂದು ವೈಶಿಷ್ಟ್ಯವೆಂದರೆ, ಅದು ಹಿಂದೆ ವಾಸ್ತವವಾಗಿ ನಡೆದ ಘಟನೆಯ ನಿರೂಪಣೆಯೇ ಹೌದೆಂಬುದಕ್ಕೆ ಕುರುಹಾಗಿ ಅದರ ನಿರೂಪಕರು (ಜನಪದರು) ಇಂದು ತೋರಿಸುತ್ತಿರುವ ಕೆಲವೊಂದು ಅವಶೇಷ, ಪಳೆಯುಳಿಕೆ, ವಸ್ತು, ಸ್ಥಳಗಳು, ಅದು ಕೆರೆಯಾಗಿರಬಹುದು. ಗುಡ್ಡವಾಗಿರಬಹುದು. ಬೆಟ್ಟವಾಗಿರಬಹುದು, ಹೆಬ್ಬಂಡೆಯಾಗಿರಬಹುದು, ಅಸಾಧಾರಣ ದಿನ್ನೆಯಾಗಿರಬಹುದು, ಹಿಂದಿನ ಕಾಲದ ವ್ಯಕ್ತಿಗಳು ಉಪಯೋಗಿಸುತ್ತಿದ್ದ ಉಡುಗೆ ತೊಡುಗೆ, ಆಭರಣಗಳಾಗಿರಬಹುದು; ವೀರಪುರುಷರು ಬಳಸಿದ್ದ ಆಯುಧ ಸಾಮಗ್ರಿಗಳಾಗಿರಬಹುದು. ಅಷ್ಟು ಮಾತ್ರವಲ್ಲ ಕೆಲವೊಂದು ಸ್ಥಳನಾಮ, ಗಾದೆ, ಒಗಟು, ಪಡೆನುಡಿ – ನುಡಿಗಟ್ಟು ನಂಬಿಕೆ, ಆಚರಣೆ ಇತ್ಯಾದಿಗಳು ನಿರ್ದಿಷ್ಟ ಘಟನೆಗಳ (ಐತಿಹ್ಯಗಳ) ಕುರುಹುಗಳಾಗಿ ಬಳಕೆಯಲ್ಲಿರುವುದುಂಟು. ಒಟ್ಟಿನಲ್ಲಿ ಮೇಲಿನ ಕುರುಹುಗಳ ವಿವಿಧ ಹಿನ್ನೆಲೆಯಲ್ಲಿ ಬೆಳೆದುಕೊಂಡು ಬಂದಿರುವ ಪೂರ್ವದಲ್ಲಿ ನೈಜವಾಗಿ ನಡೆದಿದ್ದೇ ಎಂಬುದಾಗಿ ಅದರ ಪ್ರಸಾರಕರಲ್ಲಿ ವಿಶ್ವಾಸವಿರುವ ಘಟನೆಯ(ಗಳ) ಮೌಖಿಕ ಸಂಪ್ರದಾಯದ ಗದ್ಯ ನಿರೂಪಣೆಯೇ ಐತಿಹ್ಯ. ಪ್ರಸ್ತುತ ಲೇಖನದಲ್ಲಿ ತುಮಕೂರು ಜಿಲ್ಲೆಯ ಕೋಟೆಗಳಲ್ಲಿ ಕಂಡುಬರುವ ಐತಿಹ್ಯಗಳ ಕುರಿತು ಅಧ್ಯಯನ ಮಾಡಲಾಗಿದೆ.*

**ಮುಖ್ಯಪದಗಳು (Keywords):** ಕರ್ನಾಟಕ ಇತಿಹಾಸ, ಜನಪದ ಸಾಹಿತ್ಯ, ಕೋಟೆಗಳು, ಐತಿಹ್ಯ, ಕುರುಹುಗಳು.

## ಪೀಠಿಕೆ

ಐತಿಹ್ಯಗಳಿಗೂ ಕಥೆಗಳಿಗೂ ವ್ಯತ್ಯಾಸವಿದೆ. ಕೋಟೆಗಳಿಗೆ ಸಂಬಂಧಿಸಿದಂತೆ ಇರುವ ಕಥೆಗಳು ಮತ್ತು ಐತಿಹ್ಯಗಳು ಸಾಕಷ್ಟಿದ್ದರೂ ಅವುಗಳಲ್ಲಿ ವ್ಯತ್ಯಾಸವಿದೆ. ಕಥೆಗಳು ಮನೋರಂಜನಾತ್ಮಕವಾಗಿರುತ್ತವೆ. ಇವುಗಳಿಗೆ ನಿರ್ದಿಷ್ಟ ಆಧಾರಗಳಿರುವುದಿಲ್ಲ ಉದಾಹರಣೆಗೆ ಕೋಟೆಗಳಿಗೆ ಸಂಬಂಧಿಸಿದಂತೆ ಮೊಲ ನಾಯಿಯನ್ನು ಬೆನ್ನಟ್ಟಿಕೊಂಡು ಹೋದ ಕತೆಗಳು, ಕನಸಿನಲ್ಲಿ ಕೋಟೆ ಕಟ್ಟಲಿಕ್ಕೆ ಸಂತ ಅಥವಾ ದೈವ ಕಾಣಿಸಿಕೊಂಡ ಬಗೆಗೆಳು ಇವುಗಳಿಗೆ ಯಾವುದೇ ಆಧಾರಗಳನ್ನು ಜನ ಸಮುದಾಯ ತೋರುವುದಿಲ್ಲ. ಇವು ಕಾವ್ಯ ಮತ್ತು ಗದ್ಯರೂಪದಲ್ಲಿಯೂ ಇರುತ್ತವೆ. ಆದರೆ ಐತಿಹ್ಯಗಳಿಗೆ ಸಂಬಂಧಿಸಿದಂತೆ ನಿರ್ದಿಷ್ಟ ಆಧಾರವನ್ನೋ

*Please cite this article as:* ಅನಿಲ್‌ಕುಮಾರ್ ಎಂ.ಕೆ. (2025). ತುಮಕೂರು ಜಿಲ್ಲೆಯ ಕೋಟೆಗಳಲ್ಲಿ ಕಂಡುಬರುವ ಐತಿಹ್ಯಗಳು. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 7(2). ಪು.ಸಂ.* 33–39

ಕುರುಹನ್ನೋ ಸಮುದಾಯ ಇವತ್ತಿಗೂ ಉಳಿಸಿಕೊಂಡು ಬಂದಿದೆ. ಮತ್ತೆ ಇವು ನೈಜವಾಗಿ ನಡೆದ ಘಟನೆಗಳೆಂದೇ ಸಮುದಾಯಗಳು ತಲತಲಾಂತರದಿಂದಲೂ ನಂಬುತ್ತಾ ಬಂದಿವೆ.

ಐತಿಹ್ಯದಿಂದಲೂ ಮನೋರಂಜನೆ ಸಿಗುವುದುಂಟು. ಆದರೆ ಮೂಲತಃ ಐತಿಹ್ಯ ಮನೋರಂಜನೆಯ ಉದ್ದೇಶವನ್ನಿರಿಸಿಕೊಂಡು ಜನ್ಮ ತಾಳಲಿಲ್ಲ ಎಂಬಂಶವನ್ನು ತಿಳಿದಿರಬೇಕಾಗುತ್ತದೆ. ತಾವು ಕಂಡು ಕೇಳಿದ ಘಟನೆಗಳನ್ನು ನೇರ, ಸರಳ, ಸಂಕ್ಷಿಪ್ತವೂ ಆದ ರೀತಿಯಲ್ಲಿ ಒಬ್ಬರಿಂದೊಬ್ಬರಿಗೆ ಹೇಳುತ್ತಾ ಬಂದುದೇ ಇಂದು ಐತಿಹ್ಯಗಳು ಕಂಡುಬರುತ್ತದೆ. ಆದರೆ ಇಂದು ಮೂಲ ಸ್ವರೂಪದಲ್ಲಿ ಉಳಿದು ಬಂದ ಇಂತಹ ಐತಿಹ್ಯಗಳು ಕೆಲವು ಮಾತ್ರ. ಒಬ್ಬರಿಂದೊಬ್ಬರಿಗೆ ದಾಟಿ ಬರುವ ಹಂತದಲ್ಲಿ ಆಯಾ ಪ್ರಸಾರಕರ ರಾಗ–ರಂಗುಗಳ ಪ್ರಭಾವದಿಂದಾಗಿ ಇಂದು ಐತಿಹ್ಯಗಳು ಹೊಸರೂಪವನ್ನು ಪಡೆದುಕೊಳ್ಳುತ್ತಿರುವುದು ಅಸಹಜವೇನಲ್ಲ. ಇಂದು ಒಂದು ಜನಪದ ಕಥೆಯಿಂದ ಯಾವ ರೀತಿಯ ಮನೋರಂಜನೆಯು ಲಭಿಸುತ್ತದೆಯೋ ಅದೇ ರೀತಿ ಇಲ್ಲವೇ ಅದಕ್ಕೆ ತೀರ ಹತ್ತಿರವಾದ ಮನೋರಂಜನೆಯು ಹೆಚ್ಚಿನ ಐತಿಹ್ಯಗಳಿಂದಲೂ ಪ್ರಾಪ್ತವಾಗುತ್ತದೆಂಬುದು ವಾಸ್ತವ ಸಂಗತಿ. ಅಂದರೆ ಮೂಲದಲ್ಲಿ ಐತಿಹ್ಯವು ಒಂದು ಸಾಹಿತ್ಯ ಪ್ರಕಾರವೆನಿಸಲು ಯೋಗ್ಯವಿರಲಿಲ್ಲ. ಅದು ವ್ಯಕ್ತಿಗಳು ಕಂಡು ಕೇಳಿದ ಘಟನೆಗಳ ನೇರ ನಿರೂಪಣೆಯಾಗಿತ್ತಷ್ಟೇ. ಇತಿಹಾಸ–ಸಂಸ್ಕೃತಿಯ ಒಂದು ಅಂಗವಾಗಿದೆ ಎಂಬ ದೃಷ್ಟಿಯಿಂದ ಇದು ಸಂಸ್ಕೃತಿ ಪ್ರಸಾರದ ಒಂದು ಸಾಧನವೂ ಆಗಿತ್ತು, ಆಗಿದೆ. ಆದರೆ ಈಗ ಅದೊಂದು ಸಾಹಿತ್ಯ ಪ್ರಕಾರವಾಗಿಯೇ ಬೆಳೆದುನಿಂತಿದೆ.

ತುಮಕೂರು ಜಿಲ್ಲೆಯ ಕೋಟೆಗಳಲ್ಲಿರುವ ಹಲವಾರು ಸ್ಮಾರಕಗಳು ಐತಿಹ್ಯಗಳಿಗೆ ಪ್ರೇರಣೆಯಾಗಿವೆ. ಈ ಐತಿಹ್ಯಗಳನ್ನು ನಿಜವೆಂದೇ ನಂಬಿರುವ ಸಮುದಾಯವು ಈ ಹೊತ್ತಿಗೂ ಅದಕ್ಕೆ ಸಾಕ್ಷಿಯಾಗಿರುವ ಸ್ಮಾರಕಗಳನ್ನು ಪೂಜಿಸುತ್ತಾ, ಆರಾಧಿಸುತ್ತಾ ತನ್ನ ಸ್ಮೃತಿಯಲ್ಲಿ ಉಳಿಸಿಕೊಂಡು ರಕ್ಷಣೆಯನ್ನು ನೀಡುತ್ತಿದೆ. ಕೆಲವು ಐತಿಹ್ಯಗಳು ಸತ್ಯಕ್ಕೆ ದೂರವಾಗಿವೆ. ಉದಾಹರಣೆಗೆ ಏಳುಮಂದಿ ಅಕ್ಕಮ್ಮಂದಿರ ದೊಣೆ ಐತಿಹ್ಯ, ಕೋತಿಬಾವಿ ಐತಿಹ್ಯ ಇತ್ಯಾದಿಗಳು. ಸಮುದಾಯ ಹೇಳುವ ಕತೆಗಳಿಗೂ ಕುರುಹುಗಳಿಗೂ ಸಾಮ್ಯತೆಯಿದ್ದರೂ ಕತೆಯಲ್ಲಿ ಕಂಡುಬರುವ ರಂಜನೀಯ ಅಂಶಗಳು ಕಾಲಾಂತರದಲ್ಲಿ ಒಬ್ಬರಿಂದ ಒಬ್ಬರಿಗೆ ಬರುವಾಗ ಪಾಠಾಂತರ ಹೊಂದಿ ಈಗಿರುವ ರೂಪ ಪಡೆದುಕೊಂಡಿವೆ.

ಒಟ್ಟಾರೆ ತುಮಕೂರು ಜಿಲ್ಲೆಯ ಕೋಟೆಗಳಿಗೆ ಸಂಬಂಧಿಸಿದಂತೆ ವೈವಿಧ್ಯಮಯವಾದ ಐತಿಹ್ಯಗಳು ಕಂಡಬರುತ್ತವೆ. ಇಲ್ಲಿನ ಸಮುದಾಯಗಳು ಇಲ್ಲಿನ ಪ್ರದೇಶಗಳನ್ನು ರಾಮಯಣದ ರಾಮನಿಗೆ, ಮಹಾಭಾರತದ ಪಾಂಡವರಿಗೆ, ದೇವತೆಗಳಿಗೆ ಋಷಿಗಳಿಗೆ ಸಮೀಕರಿಸಿ, ಇವರ ಮಹತ್ವಗಳನ್ನು ಐತಿಹ್ಯಗಳ ರೂಪದಲ್ಲಿ ಅಭಿವ್ಯಕ್ತಿಸುವುದನ್ನು ಕಾಣಬಹುದು. ಅಧ್ಯಯನದ ದೃಷ್ಟಿಯಿಂದ

1. ಕೋಟೆಗಳಲ್ಲಿನ ಜಲಸಂಬಂಧಿ ಐತಿಹ್ಯಗಳು
2. ಕೋಟೆಗಳಲ್ಲಿನ ದೈವಸಂಬಂಧಿ ಐತಿಹ್ಯಗಳು
3. ಕೋಟೆಗಳಲ್ಲಿನ ಇನ್ನಿತರ ಐತಿಹ್ಯಗಳು ಎಂದು ವಿಭಾಗಿಸಿಕೊಂಡು ಸಂಶೋಧನೆ ಕೈಗೊಳ್ಳಲಾಗಿದೆ.

**ಕೋಟೆಗಳಲ್ಲಿನ ಜಲಸಂಬಂಧಿ ಐತಿಹ್ಯಗಳು**

ಯಾವುದೇ ಕೋಟೆಯ ಸ್ಥಾಪನೆ, ನಿರ್ಮಾಣವು ಆಯಾ ಪ್ರದೇಶದ ನೀರಿನೊಂದಿಗೆ ತಳುಕು ಹಾಕಿಕೊಂಡೇ ರಚನೆಗೊಂಡಿರುತ್ತದೆ. ಯಾಕೆಂದರೆ ಕೋಟೆಗಳ ನಿರ್ಮಾಣವೇ ಶತ್ರುಗಳಿಂದ ರಕ್ಷಿಸಿಕೊಳ್ಳುವುದಾಗಿದೆ. ಶತ್ರುಗಳ ದಾಳಿ ಸಂದರ್ಭದಲ್ಲಿ ಹಲವಾರು ದಿನ ಕೋಟೆಯೊಳಗಡೆಯೇ ಇರಬೇಕಾದ ಪರಿಸ್ಥಿತಿ ಸಮುದಾಯಕ್ಕೆ ನಿರ್ಮಾಣವಾಗುತ್ತದೆ. ಮುನ್ನೆಚ್ಚರಿಕೆಯ ಕ್ರಮವಾಗಿ ಪ್ರತಿಯೊಂದು ಕೋಟೆಗಳನ್ನು ನಿರ್ಮಿಸುವಾಗಲೂ ಅಲ್ಲಿ ನೀರು ಸಂಗ್ರಹವಾಗುವುದನ್ನು ಇಲ್ಲವೆ ನಿರಂತರ ನೀರು ಹರಿಯುವುದನ್ನು ಹೊಂಡ (ದೊಣೆ)ಗಳನ್ನು ಕಟ್ಟಲಾಗುತ್ತದೆ. ತಾವು ಬದುಕುವುದಕ್ಕೆ ಅತ್ಯವಶ್ಯವಾಗಿರುವ ನೀರನ್ನು ಸಮುದಾಯಗಳು ಪ್ರಾಚೀನ ಕಾಲದಿಂದಲೂ ಪವಿತ್ರವೆಂದು ಭಾವಿಸಿ ಹಲವಾರು ಕಥೆ, ಐತಿಹ್ಯ, ಗಾದೆ ಕಟ್ಟಿ, ಅವುಗಳಲ್ಲಿ ಹಲವಾರು ಆಚರಣೆಗಳನ್ನು ನೆರವೇರಿಸುತ್ತಿವೆ.

ತುಮಕೂರು ಜಿಲ್ಲೆಯ ಕೋಟೆಗಳಲ್ಲಿ ಹಲವಾರು ದೊಣೆ(ಹೊಂಡ)ಗಳು, ಬಾವಿಗಳು, ಕಲ್ಯಾಣಿಗಳು ಕಂಡುಬರುತ್ತವೆ. ಇವುಗಳನ್ನು ಕಲುಷಿತಗೊಳಿಸದಂತೆ ಇಲ್ಲಿನ ನೀರನ್ನು ಪವಿತ್ರೀಕರಿಸಿ, ಇವುಗಳ ಸುತ್ತಲೂ ವೈವಿಧ್ಯಮಯ ಐತಿಹ್ಯಗಳು ಸೃಷ್ಟಿಯಾಗಿ ಕಾಲದಿಂದ ಕಾಲಕ್ಕೆ ಮೌಖಿಕ ಪರಂಪರೆಯ ಕಥೆ, ನಂಬಿಕೆ, ಗಾದೆ, ಆಚರಣೆ ಮುಂತಾದವುಗಳ ಮೂಲಕ ಇನ್ನೂ ಉಳಿದುಕೊಂಡು ಬಂದಿವೆ. ಕೋಟೆಗಳಲ್ಲಿರುವ ಎಲ್ಲಾ ದೊಣೆಗಳಿಗೂ ಒಂದೊಂದು ಹೆಸರನ್ನು ಕರೆದಿರುವುದನ್ನು ಮತ್ತು ಅವುಗಳ ಹಿಂದೆ ಕಥೆ, ಐತಿಹ್ಯಗಳನ್ನು ಒಳಗೊಂಡಿರುವುದನ್ನು ಕಾಣಬಹುದಾಗಿದೆ. ಹೀಗೆ ಇರುವ ಕೆಲವು ಐತಿಹ್ಯಗಳನ್ನು ಇಲ್ಲಿ ವಿವರಿಸಲಾಗಿದೆ.

**ಏಳುಮಂದಿ ಅಕ್ಕಮ್ಮಂದಿರ ದೊಣೆ**

ಇದು ಭಸ್ಮಾಂಗಿಕೋಟೆಯ ಶಿಖರದ ನೈರುತ್ಯ ದಿಕ್ಕಿನಲ್ಲಿದ್ದು, ಎರಡು ಬೃಹತ್ ಬಂಡೆಯ ಮಧ್ಯದಲ್ಲಿದೆ. ಈ ದೊಣೆಯು ಉತ್ತರ ದಕ್ಷಿಣವಾಗಿ ಉತ್ತರಕ್ಕೆ ಇಟ್ಟಿಗೆ ಮತ್ತು ಗಾರೆಯಿಂದ ಅಡ್ಡಕಟ್ಟೆ ಕಟ್ಟಲಾಗಿದೆ. ಇದರಲ್ಲಿ ಸದಾ ನೀರು ತುಂಬಿರುತ್ತದೆ. ಈ ದೊಣೆಯ ಬಗೆಗೆ ಐತಿಹ್ಯ ಹೀಗಿದೆ.

ದೇವಲೋಕದ ಏಳು ಮಂದಿ ಅಕ್ಕತಂಗಿಯರು ಲೋಕ ಸಂಚಾರ ಮಾಡುತ್ತಿರುವಾಗ ಈ ಭಸ್ಮಾಂಗಿ ಬೆಟ್ಟದ ಜಾಜಿಗಿರಿ ಹೂವನ್ನು ನೋಡಿ ಮನಸೋತು ಇದರ ವಾಸನೆಯನ್ನು ಸವಿಯಲು ಇಲ್ಲಿಗೆ ಬರುತ್ತಾರೆ. ಈ ಜಾಜಿಗಿರಿ ಗಿಡಗಳ ಪಕ್ಕದಲ್ಲಿಯೇ ಒಂದು ದೊಣೆಯಿದೆ. ಈ ದೊಣೆಯನ್ನು ಕಂಡು ಏಳು ಮಂದಿ ಅಕ್ಕತಂಗಿಯರು ಜಾಜಿಗಿರಿ ಹೂವನ್ನು ಕಟ್ಟಿಕೊಂಡು ಈಜಾಡುತ್ತಿದ್ದರೆಂದು ಹೇಳುತ್ತಾರೆ. ಅಲ್ಲದೆ ಪ್ರತಿವರ್ಷ ಜಾಜಿಗಿರಿ ಹೂವಿನ ಸಂದರ್ಭದಲ್ಲಿ ಈ ಏಳು ಜನ ಅಕ್ಕತಂಗಿಯರು ಹೂವನ್ನು ಉಡುಗೆ ಮಾಡಿಕೊಂಡು ಈಜಾಡುತ್ತಾರೆ ಎನ್ನುವ ಕಲ್ಪನೆಯಿದೆ. ಆದರೆ ಯಾರ ಕಣ್ಣಿಗೂ ಬೀಳುವುದಿಲ್ಲ ಎನ್ನುತ್ತಾರೆ. ಈ ಹಿನ್ನೆಲೆಯಲ್ಲಿ ಈ ದೊಣೆಗೆ "ಏಳು ಮಂದಿ ಅಕ್ಕಮ್ಮಂದಿರು" ಎಂಬ ಹೆಸರು ಬಂದಿದೆ ಎನ್ನುತ್ತಾರೆ. ದೇವಕನ್ಯೆಯರು ಈ ದೊಣೆಯಲ್ಲಿ ಈಜಾಡಿರುವುದರಿಂದ ಇಲ್ಲಿನ ಸುತ್ತಮುತ್ತ ಸ್ತ್ರೀಯರು ಪವಿತ್ರವಾದ ದೊಣೆಯೆಂದು ಹಲವಾರು ಆಚರಣೆಗಳನ್ನು ಮಾಡುತ್ತಾರೆ.

**ಅಕ್ಕತಂಗಿಯರ ದೊಣೆಗಳು**

ಹುತ್ರಿದುರ್ಗದ ಶಂಕರೇಶ್ವರ ದೇವಾಲಯದ ಪೂರ್ವಭಾಗಕ್ಕೆ ಅಕ್ಕ–ತಂಗಿಯರ ದೊಣೆಗಳಿವೆ. ಈ ಅಕ್ಕತಂಗಿಯರು ಶಿವಭಕ್ತೆಯರಾಗಿ, ಪತಿವ್ರತೆಯಾಗಿ ಬಾಳಿದ ಶರಣೆಯರು. ಒಮ್ಮೆ ದುರ್ಗವು ಶತ್ರುಗಳ ಕೈವಶವಾದಾಗ ಇವರು ಶತ್ರುಗಳ ಕೈಯಿಂದ ಪಾರಾಗಿ ತಮ್ಮ ಶೀಲವನ್ನು ಕಾಪಾಡಿಕೊಳ್ಳಲು ತಮ್ಮ ಒಡವೆಗಳನ್ನು ದೊಣೆಗಳಿಗೆ ಎಸೆದು, ತಾವು ದೊಣೆಗಳಿಗೆ ಬಿದ್ದು ಪ್ರಾಣ ಕಳೆದುಕೊಂಡರು ಎಂಬುದಾಗಿ ಸ್ಥಳ ಪುರಾಣದಿಂದ ತಿಳಿದುಬರುತ್ತದೆ. ಈ ದೊಣೆಗಳಲ್ಲಿ ಅಕ್ಕತಂಗಿಯರು ಬಿದ್ದು ಪ್ರಾಣ ಕಳೆದುಕೊಂಡಿದ್ದರಿಂದ ಇದಕ್ಕೆ 'ಅಕ್ಕತಂಗಿಯರ' ದೊಣೆಯೆಂದು ಕರೆಯುತ್ತಾರೆ.

**ಕೆಂಪಲಕ್ಕಯ್ಯನ ದೊಣೆ**

ಇದು ಹುತ್ರಿದುರ್ಗದ ಕುಂಭಿಯ ಭಾಗದಲ್ಲಿದೆ. ಇದು ಅಕ್ಕತಂಗಿಯರ ದೊಣೆಯ ಸ್ವಲ್ಪ ದೂರದಲ್ಲಿದೆ. ಈ ದೊಣೆಗೆ ಈ ಹೆಸರು ಬರುವುದಕ್ಕೆ ಕಾರಣ ಈ ರೀತಿ ಹೇಳುತ್ತಾರೆ.

ಒಂದು ಬಾರಿ ಕುರುಬನು ಕುರಿಗಳನ್ನು ದುರ್ಗಕ್ಕೆ ಮೇಯಿಸಲು ಹೋದನು. ಕುರಿಗಳಲ್ಲಿ ತನ್ನ ಅಚ್ಚುಮೆಚ್ಚಿನ ಒಂದು ಕುರಿಯನ್ನು ಈ ದೊಣೆಯಲ್ಲಿ ಮೈ ತೊಳೆಯಲು ಹೋದನು. ಕುರಿಯನ್ನು ಹಿಡಿದು ತನ್ನೆರಡು ಕಾಲು ಮಧ್ಯೆದಲ್ಲಿಟ್ಟುಕೊಂಡು ಮೈತೊಳೆಯುತ್ತಿದ್ದನು. ಆ ಕುರಿಯು ಕುರುಬನನ್ನು ಕೊಸರಿ ಮೇಲಕ್ಕೆ ಹಾರಿತು. ಇದರ ರಭಸದಿಂದ ಕೆಂಪಲಕ್ಕಯ್ಯನು ಈ ದೊಣೆಯಲ್ಲಿನ ಕಲ್ಲಿಗೆ ಬಿದ್ದನು. ಇದರಿಂದ ಈತನ ತಲೆಗೆ ಭಾರಿ ಪೆಟ್ಟು ಬಿದ್ದು ರಕ್ತಸ್ರಾವದಿಂದ ನೀರಿನಲ್ಲಿಯೇ ಸತ್ತನು. ಈತನು ಸಂಜೆ ಮನೆಗೆ ಬರದ ಕಾರಣ ರಾತ್ರಿಯಲ್ಲಿ ಬೆಳಕಿಡಿದು ಹುಡುಕಿದರು. ಈತನ ಶವವು ದೊಣೆಯಲ್ಲಿ ಬಿದ್ದಿದ್ದನ್ನು ಹೊರತೆಗೆದರು. ಅಂದಿನಿಂದ 'ಕೆಂಪಲಕ್ಕಯ್ಯ ಸತ್ತ ದೊಣೆ' ಎಂದು ಹೆಸರಾಯಿತು. ಅದು ನಂತರ ಕೆಂಪಲಕ್ಕಯ್ಯನದೊಣೆ ಎಂದು ಹೆಸರಾಯಿತು.

**ನಾಮದ ಚಿಲುಮೆ**

ದೇವರಾಯನದುರ್ಗದ ಬುಡದಲ್ಲಿ ಈ ಚಿಲುಮೆಯನ್ನು ಕಾಣಬಹುದು. ಈ ಚಿಲುಮೆ ಹೇಗೆ ಮೂಡಿತು ಎಂಬುದನ್ನು ಈ ಕೆಳಗಿನಂತೆ ಹೇಳುತ್ತಾರೆ.

ಶ್ರೀ ರಾಮನು ತನ್ನ ವನವಾಸದ ಕೆಲವು ದಿನಗಳಲ್ಲಿ ಈಗಿನ ದೇವರಾಯನದುರ್ಗದಲ್ಲಿ ಕಳೆದನೆಂದು ಪ್ರತೀತಿಯಿದೆ. ರಾಮ, ಸೀತೆ, ಲಕ್ಷ್ಮಣರು ಮೊದಲ ರಾತ್ರಿ ಈ ಪ್ರದೇಶದಲ್ಲಿ ತಂಗಿದ್ದರು. ಬೆಳಿಗ್ಗೆ ಇವರಿಗೆ ನಾಮ ಇಟ್ಟುಕೊಳ್ಳಲು ನೀರು ಎಲ್ಲಿಯೂ ಸಿಗದಿದ್ದಾಗ ಅಲ್ಲಿಯೇ ಇದ್ದ ಬಂಡೆಗೆ ಬಾಣವನ್ನು ಬಿಟ್ಟನು. ಇದರಿಂದ ನೀರು ಮೇಲಕ್ಕೆ ಚಿಮ್ಮಿತು ನಂತರ ನಾಮವನ್ನು ನೀರಿನಲ್ಲಿ ತೇಯ್ದು ಹಣೆಗೆ ತಿಲಕವನ್ನು ಇಟ್ಟುಕೊಂಡನು. ಈ ಚಿಲುಮೆಯು ನಾಮ ಹಚ್ಚಿಕೊಳ್ಳಲು ಸೃಷ್ಟಿಯಾದ್ದರಿಂದ ಇದಕ್ಕೆ **'ನಾಮದ ಚಿಲುಮೆ'** ಎಂದು ಹೆಸರಾಯಿತೆಂದು ಇಲ್ಲಿಯವರ ನಂಬಿಕೆಯಾಗಿದೆ.

**ಧನುಸ್ ತೀರ್ಥ**

ಇದು ದೇವರಾಯನದುರ್ಗದ ಬಂಗಲೆ ಬೆಟ್ಟದಲ್ಲಿರುವ ಒಂದು ದೊಣೆ. ಇದಕ್ಕೆ ಧನುಸ್‌ತೀರ್ಥ ಎಂದು ಒಂದು ಕಥನ ಹೀಗಿದೆ.

ಒಂದು ಬಾರಿ ರಾಮ–ಲಕ್ಷ್ಮಣ–ಸೀತೆ ವನವಾಸದ ಸಂದರ್ಭದಲ್ಲಿ ಈ ದುರ್ಗಕ್ಕೆ ಭೇಟಿ ಕೊಟ್ಟಿದ್ದರು. ಆ ಸಂದರ್ಭದಲ್ಲಿ ಸೀತೆಗೆ ಬಾಯಾರಿಕೆಯಾಯಿತು. ಈ ಪ್ರದೇಶದಲ್ಲಿ ಎಲ್ಲಿಯೂ ನೀರು ಸಿಗದಿದ್ದಾಗ ಲಕ್ಷ್ಮಣನು ಬತ್ತಳಿಕೆಯಲ್ಲಿದ್ದ ಒಂದು ಧನಸ್ಸನ್ನು ಬಳಸಿ ಈ ದೋಣೆಯನ್ನು ನಿರ್ಮಿಸಿದನೆಂದು ಇಲ್ಲಿಯವರ ನಂಬಿಕೆ. ಈ ದೋಣೆಯಿಂದ ಬಂದ ನೀರನ್ನು ಕುಡಿದು ಸೀತೆಯು ದಣಿವಾರಿಸಿಕೊಂಡಳು. ಅಂದಿನಿಂದ ಇವತ್ತಿನವರೆಗೆ ಇದನ್ನು ಧನುಸ್‌ತೀರ್ಥವೆಂದೇ ಕರೆಯುತ್ತಾರೆ. ಈ ಧನುಸ್‌ತೀರ್ಥದಲ್ಲಿ ಮೂರು ಕಾಲವು ನೀರು ಒಳಗೊಂಡಿರುತ್ತದೆ. ಧನುಷ್ಕೋಟಿ ಕ್ಷೇತ್ರದಲ್ಲಿ ಮಿಂದ ಪುಣ್ಯವೂ ಈ ಧನುಷ್ ತೀರ್ಥದಲ್ಲಿ ಮಿಂದರೆ ಬರುತ್ತದೆನ್ನುವುದು ಇಲ್ಲಿಯ ಜನರ ಭಾವನೆ.

**ಪರಾಶರತೀರ್ಥ**

ಇದು ದೇವರಾಯನದುರ್ಗದಲ್ಲಿರುವ ಒಂದು ದೋಣೆ ಇದಕ್ಕೆ ಪರಾಶರತೀರ್ಥ ಅಥವಾ ಪಾವನತೀರ್ಥವೆಂದು ಕರೆಯುತ್ತಾರೆ. ಈ ದೋಣೆಗೆ ಪರಾಶರತೀರ್ಥ ಎಂದು ಹೆಸರು ಬರಲು ಒಂದು ಕಥನ ಹೀಗಿದೆ.

ಒಮ್ಮೆ ದೇವರಾಯನದುರ್ಗದಲ್ಲಿ ಪರಾಶರಮುನಿಗಳು ಬಹುಕಾಲ ಕುಳಿತು ತಪಸ್ಸು ಮಾಡಿದರಂತೆ. ಈ ತಪಸ್ಸನ್ನು ಮೆಚ್ಚಿದ ವಿಷ್ಣುವು ಶ್ರೀ ಲಕ್ಷ್ಮೀನರಸಿಂಹಸ್ವಾಮಿಯ ರೂಪದಲ್ಲಿ ಬಂದು ದರ್ಶನ ನೀಡಿ ಇಷ್ಟಾರ್ಥಕ್ಕೆ ಸಿದ್ಧಿ ಎಂದು ಹೇಳಿ ಮಾಯವಾದರು. ಪರಾಶರರು ತಪಸ್ಸು ಮಾಡಿದ್ದು, ಒಂದು ದೋಣೆಯ ದಡದಲ್ಲಿ. ಆ ದಡದಲ್ಲಿಯೆ ಶ್ರೀ ವಿಷ್ಣುವನ್ನು ನೋಡಿ ಪಾವನವಾಗಿದ್ದುದರಿಂದ ಈ ದೋಣೆಗೆ ಪಾವನತೀರ್ಥ ಅಥವಾ ಪರಾಶರತೀರ್ಥ ಎಂದು ಹೆಸರು ಪಡೆಯಿತೆಂದು ಇಲ್ಲಿನ ಜನರ ನಂಬಿಕೆ.

ಪ್ರತಿವರ್ಷವು ಶ್ರೀ ನರಸಿಂಹಸ್ವಾಮಿ ಜಾತ್ರೆಯ ದಿವಸ ಈ ದೋಣೆಯಲ್ಲಿ ಮೀಯಲು ಸಾಲು ಸಾಲಾಗಿ ನಿಂತಿರುತ್ತಾರೆ. ಈ ಪಾವನತೀರ್ಥಲ್ಲಿ ಮಿಂದರೆ ನಮಗೂ ಪಾವನವಾಗಬಹುದೆಂದು ಈ ಜನರ ನಂಬಿಕೆಯಾಗಿದೆ.

**ನರಸಿಂಹತೀರ್ಥ, ಪಾದತೀರ್ಥ**

ದೇವರಾಯನದುರ್ಗದ ಪೂರ್ವದಿಕ್ಕಿನಲ್ಲಿ ಇವೆರಡು ದೋಣೆಗಳಿವೆ. ಈ ದೋಣೆಗಳಿಗೆ ಈ ಹೆಸರು ಬರಲು ಕಾರಣವನ್ನು ಈ ರೀತಿ ಹೇಳುತ್ತಾರೆ.

ಒಂದು ಬಾರಿ ಬ್ರಹ್ಮದೇವನು ಈ ದುರ್ಗವನ್ನು ಪುಣ್ಯಕ್ಷೇತ್ರವಾಗಿಸಲು ಬಯಸಿದನಂತೆ. ಅದಕ್ಕಾಗಿ ಕುಂಭಿಗಿರಿ ಶಿಖರದಲ್ಲಿ ತಪಸ್ಸಿಗೆ ಕುಳಿತನಂತೆ. ಬ್ರಹ್ಮನು ಸುಮಾರು ಹತ್ತು ವರ್ಷಗಳ ಕಾಲ ತಪಸ್ಸು ಮಾಡಿದನು. ಈ ತಪಸ್ಸನ್ನು ಮೆಚ್ಚಿದ ಶ್ರೀ ನಾರಾಯಣಸ್ವಾಮಿಯು ಶ್ರೀಲಕ್ಷ್ಮೀನರಸಿಂಹ ರೂಪದಲ್ಲಿ ಗರುಡ ರೂಢನಾಗಿ ಬಂದು ಬ್ರಹ್ಮನಿಗೆ ದರ್ಶನ ಭಾಗ್ಯ ಕರುಣಿಸಿದನು. ಆಗ ಬ್ರಹ್ಮನು ಶ್ರೀ ಲಕ್ಷ್ಮೀನರಸಿಂಹಸ್ವಾಮಿಯನ್ನು ಪೂರ್ವಭಿಮುಖವಾಗಿ ಕುಳ್ಳಿರಿಸಿದನು ಆಗ ಬ್ರಹ್ಮನು ಕುಂಭಾಭಿಷೇಕ ಮಾಡಿದನು. ಈ ಕುಂಭಾಭಿಷೇಕದಿಂದ ಹರಿದ ತೀರ್ಥವು ನರಸಿಂಹತೀರ್ಥ, ಪಾದತೀರ್ಥಗಳಾಗಿ ರೂಪುಗೊಂಡವು ಎಂದು ಇಲ್ಲಿನ ಜನರು ಹೇಳುತ್ತಾರೆ.

**ಚಕ್ರತೀರ್ಥ**

ದೇವರಾಯನದುರ್ಗದ ನೆಲಪಟ್ಟಣದ ಭೋಗನರಸಿಂಹಸ್ವಾಮಿ ದೇವಸ್ಥಾನದ ಪಕ್ಕದ ಈ ದೊಣೆ. ಇದಕ್ಕೆ ಚಕ್ರತೀರ್ಥವೆಂದು ಹೆಸರು ಬರಲು ಕಾರಣವನ್ನು ಈ ರೀತಿ ಹೇಳುತ್ತಾರೆ.

ಒಮ್ಮೆ ದೂರ್ವಾಸರು ಈ ಜಾಗದಲ್ಲಿ ಒಂದು ಸಾವಿರ ವರ್ಷಗಳ ಕಾಲ ತಪಸ್ಸು ಮಾಡಿದರು.

ಈ ತಪಸ್ಸು ಮಾಡುವಾಗ ದೂರ್ವಾಸರು ಪರಶಿವನ ದರ್ಶನಕ್ಕೆ ಹೋಗಲು ನಂದಿಕೇಶ್ವರನು ಅಡ್ಡಿಪಡಿಸಿದನೆಂದು ಹೇಳುತ್ತಾರೆ. ಆಗ ಕುಪಿತರಾದ ದೂರ್ವಾಸರು ನಂದಿಕೇಶ್ವರನಿಗೆ ಶಾಪ ನೀಡಿದರು. ಇದರಿಂದ ಎಚ್ಚೆತ್ತ ನಂದಿಕೇಶ್ವರನು ದೂರ್ವಾಸರಲ್ಲಿ ಮೋಕ್ಷಕ್ಕೆ ಮೊರೆಯಿಟ್ಟನು. ಆಗ ದೂರ್ವಾಸರು 'ನೀನು ಕರಿಗಿರಿಕ್ಷೇತ್ರ' (ದೇವರಾಯನದುರ್ಗ)ದಲ್ಲಿ ತಪಸ್ಸು ಮಾಡುತ್ತಿರು, ನಾನು ಒಂದು ಬಾರಿ ಬಂದು ನಿನಗೆ ಮೋಕ್ಷ ಕೊಡುತ್ತೇನೆಂದು ಹೇಳುತ್ತಾರೆ. ಅದೇ ರೀತಿ ನಂದಿಕೇಶ್ ್ವರನು ದೇವರಾಯನ ದುರ್ಗದಲ್ಲಿ ತಪಸ್ಸು ಮಾಡುತ್ತಾನೆ. ಸುಮಾರು ವರ್ಷಗಳ ನಂತರ ದೂರ್ವಾಸರು ಬಂದು ನಂದಿಕೇಶ್ವರನಿಗೆ ಮೋಕ್ಷ ಮಾಡಿದರು. ಈ ಸಂದರ್ಭದಲ್ಲಿ ದೂರ್ವಾಸರು ಈಗಿರುವ ಚಕ್ರತೀರ್ಥವನ್ನು ನಿರ್ಮಿಸಿ ಅದರಲ್ಲಿ ಮಿಂದು ನೆಲಪಟ್ಟಣದಲ್ಲಿ ಈಗ ಇರುವ ಭೋಗನರಸಿಂಹಸ್ವಾಮಿಯನ್ನು ಪ್ರತಿಷ್ಠಾಪಿಸಿದರೆಂದು ಪ್ರತೀತಿಯಿದೆ. ಅಂದಿನಿಂದ ಈ ದೊಣೆಗೆ ಚಕ್ರತೀರ್ಥವೆಂದು ಹೆಸರು ಬಂದಿತೆಂದು ಇಲ್ಲಿನ ಜನರ ನಂಬಿಕೆಯಾಗಿದೆ.

ಈ ಮೇಲಿನ ಐತಿಹ್ಯಗಳನ್ನು ಗಮನಿಸಿದರೆ ತುಮಕೂರು ಜಿಲ್ಲೆ ಕೋಟೆಯೊಳಗಿನ ನೀರಿನೊಂದಿಗೆ ಜನಸಮುದಾಯ ಹೊಂದಿರುವ ಅಂತಃಸಂಬಂಧ ಅರಿವಾಗುತ್ತದೆ. ದೊಣೆ ಅಥವಾ ಕಲ್ಯಾಣಿ ಎನ್ನುವ ಐತಿಹ್ಯ ಪಠ್ಯಗಳು ಜನಸಮುದಾಯದಲ್ಲಿ ನಡೆದಿರಬಹುದಾದ ನೈಜ ಘಟನೆಯನ್ನು ವಿವರಿಸುವುದನ್ನು ಕಾಣುತ್ತೇವೆ. ಇನ್ನು ತೀರ್ಥ ಎನ್ನುವ ಹೆಸರಿನಲ್ಲಿ ಕೊನೆಗೊಳ್ಳುವ ಐತಿಹ್ಯಗಳು (ಉದಾ : ರಾಮತೀರ್ಥ, ಧನುಸ್ತೀರ್ಥ, ಪರಾಶರತೀರ್ಥ ಇತ್ಯಾದಿ) ಪೌರಾಣಿಕ ಆಯಾಮವನ್ನು ಪಡೆದುಕೊಂಡಿವೆ. ಪೌರಾಣಿಕವಾಗಿ ನಡೆದಿವೆ ಎಂದು ಹೇಳಲಾಗುವ ಘಟನೆಗಳಿಗೆ ಕುರುಹುಗಳನ್ನು ಈಗಲೂ ತೋರಿಸುತ್ತಾರೆ. ಪ್ರಶ್ನೆಯೆಂದರೆ ಐತಿಹ್ಯಗಳು ವಾಸ್ತವವಾಗಿ ನಡೆದಿರಬಹುದಾದ ಘಟನೆಗಳನ್ನು ರಂಜನೀಯವಾಗಿ ಹೇಳಬಹುದಾದರೆ ಈ ಪೌರಾಣಿಕ ಅಂಶಗಳು ಕೋಟೆಯಲ್ಲಿರುವ ಸ್ಮಾರಕಗಳೊಂದಿಗೆ ಹೇಗೆ ನಂಟನ್ನು ಬೆಸೆದುಕೊಂಡವು? ಎನ್ನುವುದು. ಮುಖ್ಯವಾಗಿ ಪೌರಾಣಿಕ ಅಂಶಗಳನ್ನು ಒಳಗೊಂಡಿರುವ ಐತಿಹ್ಯಗಳು ಮತ್ತು ಜಲಸಂಬಂಧಿ ಸ್ಮಾರಕಗಳು ಸಮುದಾಯಗಳಿಂದ ಪೂಜೆಗೊಳ್ಳುವಂತಹವುಗಳಾಗಿವೆ. ಯಾವ ದೊಣೆ, ತೀರ್ಥ, ಕಲ್ಯಾಣಿಗಳು ಸಮುದಾಯದಿಂದ ಪೂಜೆಗೊಳ್ಳುತ್ತಿವೆಯೋ ಆ ಸ್ಮಾರಕಗಳೆಲ್ಲ ಪೌರಾಣಿಕ ಆಯಾಮವನ್ನೋ ಇಲ್ಲವೆ ದೈವ ಸಂಬಂಧವನ್ನೋ ಹೊಂದಿವೆ. (ಉದಾ : ರಾಮತೀರ್ಥ, ನಾಮಚಿಲುಮೆ, ಧನುಸ್ತೀರ್ಥ ಇತ್ಯಾದಿ) ಯಾವ ಜಲಸಂಬಂಧಿ ಸ್ಮಾರಕಗಳು ಪೂಜೆಗೊಳ್ಳುತ್ತಿಲ್ಲವೋ ಅಂತಹ ಸ್ಮಾರಕಗಳು ಹಿಂದೆ ನಡೆದಿರಬಹುದಾದ ನೈಜ ಘಟನೆಗಳನ್ನು ಉಳಿಸಿಕೊಂಡ ಐತಿಹ್ಯಗಳೆಲ್ಲ 'ದೊಣೆ'(ಹೊಂಡ) ಎನ್ನುವ ಜನಪದ ಶಬ್ದವನ್ನೇ ಹೊಂದಿರುವುದು ಹಾಗೂ ಪೌರಾಣಿಕ ಆಯಾಮ ಹೊಂದಿರುವ ಐತಿಹ್ಯಗಳೆಲ್ಲ 'ತೀರ್ಥ' ಎನ್ನುವ ಧಾರ್ಮಿಕ ಪದವನ್ನು ಹೆಚ್ಚಾಗಿ ಹೊಂದಿರುವುದು ಕುಡ ಇದಕ್ಕೆ ಆಧಾರವಾಗಿ ಹೇಳಬಹುದಾಗಿದೆ.

ಇದೇ ರೀತಿ ತುಮಕೂರು ಜಿಲ್ಲಾ ವ್ಯಾಪ್ತಿಯ ಕೋಟೆಗಳಲ್ಲಿ ಕಂಡುಬರುವ ಹನುಮನ ದೊಣೆ, ಚಂದ್ರದೊಣೆ, ನವಿಲುದೊಣೆ, ಎಮ್ಮೆದೊಣೆ, ದೊಡ್ಡದೊಣೆ, ಜಲಧಿದೊಣೆ, ತಿಳಿನೀರಿನ ದೊಣೆಗಳಂತಹ ಹಲವಾರು ದೊಣೆ, ತೀರ್ಥ, ಕಲ್ಯಾಣಿಗಳಿಗೆ ಒಂದೊಂದು ಸಾಂಸ್ಕೃತಿಕ ಹಿನ್ನೆಲೆ ಇದೆ. ಇವುಗಳಿಗೆ ಒಂದೊಂದು ಹೆಸರೂ ಇದೆ. ಈ ಹೆಸರು ಬರಲು ಅವುಗಳ ಆಕಾರ, ವೈಶಿಷ್ಟ್ಯ ಮತ್ತು ಅವುಗಳೊಂದಿಗೆ ಜನಸಮುದಾಯಗಳು ನಡೆಸಿದ ಘಟನೆಗಳು ಕಾರಣವಾಗಿವೆ. ಕೆಲವು ಪುರಾಣಗಳಿಗೆ ಸಂಬಂಧಿಸಿದ ಇಲ್ಲಿನ ಐತಿಹ್ಯಗಳು ಪಾಂಡವರು ಮತ್ತು ಶ್ರೀರಾಮಚಂದ್ರ ತಮ್ಮ ವನವಾಸಗಳ ಅವಧಿಯನ್ನು ಇಲ್ಲೇ ಕಳೆದಿದ್ದರು. ಈ ವಸ್ತುಗಳು ಅವರಿಂದಲೇ ಸ್ಥಾಪಿತವಾದವು ಎಂದು ಸಮುದಾಯಗಳು ಹೆಮ್ಮೆಯಿಂದ ಹೇಳುತ್ತವೆ. ಇವುಗಳ ಹಿನ್ನೆಲೆಯಲ್ಲಿ ತಮ್ಮ ಪ್ರದೇಶಗಳನ್ನು ರಾಮನಿಂದ, ಋಷಿಗಳಿಂದ ಹಾಗೂ ಇನ್ನಿತರೆ ದೈವಗಳಿಂದ ಪವಿತ್ರೀಕರಿಸುವುದನ್ನು ಕಾಣಬಹುದು.

**ಪರಾಮರ್ಶನಗ್ರಂಥಗಳು**


- ಚಂದ್ರಶೇಖರ್ ಎನ್.,(ಸಂ) ತುಮಕೂರು ಜಿಲ್ಲಾ ಗೆಜೆಟಿಯರ್, ಪರಿಷ್ಕೃತ ಆವೃತ್ತಿ. ಕರ್ನಾಟಕ ಗೆಜೆಟಿಯರ್ ಇಲಾಖೆ, ಕರ್ನಾಟಕ ಸರ್ಕಾರ. 2017.
- ಭಾಸ್ಕರಪ್ಪ ಸಿ.ಎನ್., ತುಮಕೂರು ಜಿಲ್ಲಾದರ್ಶನ, ಟೈಮ್ಸ್ ಪಬ್ಲಿಕೇಶನ್ಸ್, ತುಮಕೂರು. ಮೈಸೂರು ಆರ್ಕಿಯಾಲಜಿಕಲ್ ರಿಪೋರ್ಟ್ಸ್, 1901–194.
- ನಂದೀಶ್ವರ ಎನ್., ಸಿರಾತಾಲ್ಲೂಕಿನ ಸ್ಮಾರಕಗಳು ಮತ್ತು ಶಾಸನಗಳು, ಪೂರ್ಣ ಚಂದ್ರತೇಜಸ್ವಿ, ಪ್ರಕಾಶನ, ತುಮಕೂರು, 2008.
- ನಾರಾಯಣಾ ಚಾರ್ಯ ಕೆ., ಮಧುಗಿರಿ ಚರಿತ್ರೆ, ಪ್ರ.ವಿ.ಬಿ. ಸುಬ್ಬಯ್ಯ ಅಂಡ್ ಸನ್ಸ್, ಬೆಂಗಳೂರು,
- ನಂದೀಶ್ವರ ಎನ್., ಸಿರಾ ತಾಲ್ಲೂಕಿನ ದರ್ಶನ, ಪೂರ್ಣ ಚಂದ್ರತೇಜಸ್ವಿ, ಪ್ರಕಾಶನ, ತುಮಕೂರು, 2008.
- ಮುದ್ದುವೀರಪ್ಪ., ತುಮಕೂರು ಜಿಲ್ಲೆಯ ಕೋಟೆಗಳ ಸಾಂಸ್ಕೃತಿ ಒಳನೋಟಗಳು, ಹೊಸಪಾಳ್ಯ, ಮಾಗಡಿ. 2011.
- ಲಕ್ಷ್ಮಣ ಸಿ.ಎಮ್., ತುಮಕೂರು ಜೆಲ್ಲೆಯ ಭೌಗೋಳಿಕ ಪರಿಸರ ಮತ್ತು ಅಭಿವೃದ್ಧಿ, ದರ್ಶನ ಪ್ರಕಾಶನ, ತುಮಕೂರು, 2000.
- ಶಿವತಾರಕ್ ಕೆ.ಬಿ., ತುಮಕೂರು ಜಿಲ್ಲೆಯ ಪುರಾತತ್ವ ಕುರುಹುಗಳ ಸಾಂಸ್ಕೃತಿಕ ಅಧ್ಯಯನ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 1997.